**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.47/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಬಸನಗೌಡ ಸೊರಟೂರು | ***P.W-2*** |
| ತಂದೆಯ ಹೆಸರು | : ರುದ್ರಗೌಡ | ***C.W-3*** |
| ವಯಸ್ಸು | : 53 ವರ್ಷ | |
| ಉದ್ಯೋಗ | : ವ್ಯಾಪಾರ | |
| ವಾಸ | : ರಾಣೆಬೆನ್ನೂರು | |

**ದಿನಾಂಕಃ 24-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಸಾಕ್ಷಿಗೆ ಅಂಗಡಿ ಬಳಿಯಲ್ಲಿ ಆದ ಪಂಚನಾಮೆ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಮತ್ತೊಂದು ಪಂಚನಾಮೆ ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಈ ಎರಡೂ ದಾಖಲೆಗಳಿಗೆ ಸಹಿಯನ್ನು ದಿನಾಂಕ 19-10-2024 ರಂದು ಮಾಡಿರುತ್ತೇನೆ. ಒಂದು ಸಹಿಯನ್ನು ಮಂಗಳಾ ಸೀಡ್ಸ ಅಂಗಡಿಯ ಮುಂದೆ ಮತ್ತೊಂದು ಸಹಿಯನ್ನು ಕುಂಬಾರ ಓಣಿಯ ರೈಲ್ವೆ ಗೇಟ್ ಹತ್ತಿರ ಮಾಡಿರುತ್ತೇನೆ. ಸದ್ರಿ ಗಲಾಟೆಯಾದ ವಿಷಯ ಕುರಿತಂತೆ ಪಂಚನಾಮೆ ಮಾಡಿದ್ದು ಆ ಕುರಿತು ನಾನು ಸಹಿಯನ್ನು ಹಾಕಿರುತ್ತೇನೆ. ನನ್ನ ಜೊತೆ ಚಾಸಾ-2 ಮತ್ತು ಚಾಸಾ-1 ಇವರು ಇದ್ದರು. ನಿಪಿ-3 ಮತ್ತು 5, 6 ಭಾವಚಿತ್ರಗಳಲ್ಲಿ ಸಾಕ್ಷಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನ್ನದೂ ಕೂಡ ಬೀಜದ ಅಂಗಡಿ ಇದೆ. ಸದ್ರಿ ಫಿರ್ಯಾದಿದಾರನ ಅಳಿಯ ಕೂಡ

ಬೀಜದ ಅಂಗಡಿ ಇಟ್ಟಿರುತ್ತಾನೆ ಎಂದರೆ ನಿಜ. ನನ್ನದು ಮತ್ತು ದೂರುದಾರನ ಅಳಿಯನ ಮಧ್ಯೆ ವ್ಯವಹಾರ ಇದೆ ಎಂದರೆ ಸರಿ ಅಲ್ಲ. ಪೊಲೀಸರು ನನಗೆ ಪಂಚನಾಮೆ ಕಾಲಕ್ಕೆ ಬರಲು ಯಾವುದೇ ನೋಟೀಸ್ ಕೊಟ್ಟಿಲ್ಲ. ಪಂಚನಾಮೆಯನ್ನು ನಾನು ಓದಿ ನೋಡಿಕೊಂಡು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಅಂಗಡಿಯ ಚೆಕ್‌ಬಂದಿ ಪೂರ್ವಕ್ಕೆ ಹರಿಹರ ರಸ್ತೆ, ಪಶ್ಚಿಮಕ್ಕೆ ಹಾವೇರಿಗೆ ಹೋಗುವ ರಸ್ತೆ ಇದೆ. ಕುಂಬಾರ ಓಣಿ ಹತ್ತಿರ ಮಾಡಿದ ಪಂಚನಾಮೆಗೆ ಸಂಬಂಧಿಸಿದಂತೆ ಚೆಕ್‌ಬಂದಿ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ಹೇಳಲು ಬರುವುದಿಲ್ಲ. ಪೊಲೀಸರು ಹೇಳಿದ್ದರಿಂದ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ ಅಲ್ಲ.

ಪಂಚನಾಮೆಯನ್ನು ನಿಖರವಾಗಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಆಗಿದೆ ಎಂದು ಹೇಳಲು ಬರುವುದಿಲ್ಲ. ನನ್ನ ಜೊತೆ ಚಾಸಾ-2 ಇವರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಘಟನೆ ಬಗ್ಗೆ ಮಾಹಿತಿ ಇಲ್ಲ ಪೊಲೀಸರು ಬರೆದ ಪಂಚನಾಮೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿ ಅಲ್ಲ. ಗಲಾಟೆಯಾದ ಬಗ್ಗೆ ನಾನು ನೋಡಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.